ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ –581 334

**OFFICE OF THE DEPUTY CONSERVATOR OF FORESTS, HONAVAR DIVISION, HONAVAR-581334**

ದೂರವಾಣಿ: 08387–220235 ಫ್ಯಾಕ್ಸ ನಂ. 08387–221170

ನಂ. ಎ2/ಬಜೆಟ್/ಟೆಂಡರ್/ವಿವ–1/2020–21 ಹೊನ್ನಾವರ ದಿನಾಂಕ: 30.04.2020

ಜಿಲ್ಲಾಧಿಕಾರಿಗಳು ಮತ್ತು
ಟೆಂಡರ್ ಬುಲೆಟಿನ್ ಅಧಿಕಾರಿಗಳು,
ಉತ್ತರ ಕನ್ನಡ
ಕಾರವಾರ ರವರಿಗೆ.

ಮಾನ್ಯರೇ,

ವಿಷಯ: 2020–21 ನೇ ಸಾಲಿಗೆ ಅರಣ್ಯ ರಕ್ಷಣಾ ಶಿಬಿರಗಳ ನಿರ್ವಹಣೆಗೆ ಕಾವಲುಗಾರರನ್ನು ಹಾಗೂ ಇಲಾಖಾ ವಾಹನ ಚಾಲಕರನ್ನು outsource (ಹೊರಗುತ್ತಿಗೆ) ಮೂಲಕ ಪಡೆಯಲು ಸಂಕ್ಷಿಪ್ತ ಅಲ್ಪಾವಧಿ **ಮರು ಇ- ಟೆಂಡರ್** ಪ್ರಕಟಣೆ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಹೊನ್ನಾವರ ಅರಣ್ಯ ವಿಭಾಗದಲ್ಲಿ 2020–21ನೇ ಸಾಲಿಗೆ ಅನುಬಂಧ–1 ರಲ್ಲಿ ವಿವರಿಸಿದಂತೆ ವಲಯಗಳಲ್ಲಿ ಲಭ್ಯವಿರುವ ರಕ್ಷಣಾ ಶಿಬಿರಗಳಿಗೆ ಕಾವಲುಗಾರರ ಸೇವೆಯನ್ನು ಹಾಗೂ ಇಲಾಖಾ ವಾಹನ ಚಾಲಕರನ್ನು Out Source (ಹೊರಗುತ್ತಿಗೆ) ಸಂಪನ್ಮೂಲ ಏಜನ್ಸಿಯವರ ಮೂಲಕ ಪಡೆಯಲು ಸಂಕ್ಷಿಪ್ತ ಅಲ್ಪಾವಧಿ ಮರು ಟೆಂಡರ್ ಕುರಿತು ಟೆಂಡರ್ ಪ್ರಕಟಣೆಯನ್ನು (02) ಪ್ರತಿಗಳಲ್ಲಿ ಇದರ ಲಗ್ತ ಇಟ್ಟು ಒಪ್ಪಿಸಿದೆ. **ಇ–ಪ್ರೊಕ್ಯೂರಮೆಂಟ್**ನಲ್ಲಿ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 20.05.2020 ಆಗಿದ್ದು, ದಯಮಾಡಿ ಟೆಂಡರ್ ಪ್ರಕಟಣೆಯನ್ನು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಗೌರವಪೂರ್ವಕ ಕೋರಿದೆ. ಮತ್ತು ಪ್ರಕಟಗೊಳಿಸಿದ ಪ್ರತಿಗಳನ್ನು ಈ ಕಚೇರಿಗೆ ಕಳುಹಿಸಲು ಕೋರಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ.

1. ಪ್ರತಿಯನ್ನು ಜಾಹೀರಾತಿನ 2 ಪ್ರತಿಯೊಂದಿಗೆ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಉತ್ತರಕನ್ನಡ ಜಿಲ್ಲೆ, ಕಾರವಾರ ರವರಿಗೆ ಕಳುಹಿಸುತ್ತಾ ಸದರ ಪ್ರಕಟಣೆಯನ್ನು ಟೆಂಡರ್ ದಿನಾಂಕದ ಒಂದು ವಾರದ ಮುಂಚಿತವಾಗಿ ಉತ್ತರಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಪ್ರಸಾರವುಳ್ಳ ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಿ, ಪ್ರತಿಗಳನ್ನು ಈ ಕಚೇರಿಗೆ ಕಳುಹಿಸಲು ಕೋರಿದೆ.
2. ಪ್ರತಿಯನ್ನು ಜಾಹೀರಾತಿನ ಪ್ರತಿಯೊಂದಿಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ, ಶಿರಸಿ ರವರಿಗೆ ಮಾಹಿತಿಗಾಗಿ ಗೌರವಪೂರ್ವಕ ಒಪ್ಪಿಸಿದೆ.
3. ಪ್ರತಿಯನ್ನು ಜಾಹೀರಾತಿನ ಪ್ರತಿಯೊಂದಿಗೆ, ನಿರ್ದೇಶಕರು ಹಾಗೂ ಅರಣ್ಯ ಸಂರಕ್ಷಣಾಧಿಕಾರಿ, ಕಾಳಿ–ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ ರವರಿಗೆ ಮಾಹಿತಿಗಾಗಿ ಗೌರವಪೂರ್ವಕ ಒಪ್ಪಿಸಿದೆ.
4. ಪ್ರತಿಯನ್ನು ಜಾಹೀರಾತಿನ ಪ್ರತಿಯೊಂದಿಗೆ ಕೆನರಾ ವೃತ್ತದ ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಪ್ರತಿಯನ್ನು ವಲಯ ಅರಣ್ಯಾಧಿಕಾರಿ, ಭಟಕಳ, ಮಂಕಿ, ಹೊನ್ನಾವರ, ಗೇರಸಪ್ಪಾ, ಕುಮಟಾ, ಕತಗಾಲ ಮತ್ತು ಹಿರೇಗುತ್ತಿ ಇವರುಗಳಿಗೆ ಮಾಹಿತಿಗಾಗಿ ರವಾನಿಸಿದೆ.
6. ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಭಟಕಳ, ಹೊನ್ನಾವರ ಮತ್ತು ಕುಮಟಾ ಇವರಿಗೆ ಮಾಹಿತಿಗಾಗಿ ರವಾನಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ –581 334

**OFFICE OF THE DEPUTY CONSERVATOR OF FORESTS, HONAVAR DIVISION, HONAVAR-581334**

ದೂರವಾಣಿ: 08387-220235 ಫ್ಯಾಕ್ಸ ನಂ. 08387-221170

ನಂ. ಎ2/ಬಜೆಟ್/ಟೆಂಡರ್/ವಿವ-1/2020-21 ಹೊನ್ನಾವರ ದಿನಾಂಕ: 30.04.2020

**2020-21 ನೇ ಸಾಲಿಗೆ ಅರಣ್ಯ ರಕ್ಷಣಾ ಶಿಬಿರಗಳ ನಿರ್ವಹಣೆಗೆ ಕಾವಲುಗಾರರನ್ನು ಹಾಗೂ ಇಲಾಖಾ ವಾಹನ ಚಾಲಕರನ್ನು outsource (ಹೊರಗುತ್ತಿಗೆ) ಮೂಲಕ ಪಡೆಯಲು ಸಂಕ್ಷಿಪ್ತ ಅಲ್ಪಾವಧಿ ಮರು ಇ-ಟೆಂಡರ್ ಕುರಿತು.**

(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)

(ದ್ವಿ ಲಕೋಟೆ ಸಿಸ್ಟಂ)

ಸಾರ್ವಜನಿಕ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವದೇನೆಂದರೆ, ಈ ಮುಂದೆ ಕಾಣಿಸಲಾದ ದಿನಾಂಕ ಮತ್ತು ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ ಇವರ ಕಚೇರಿಯಲ್ಲಿ ಅನುಬಂಧ-1 ರಲ್ಲಿ ವಿವರಿಸಿದಂತೆ ವಲಯಗಳಲ್ಲಿ ಲಭ್ಯವಿರುವ ರಕ್ಷಣಾ ಶಿಬಿರಗಳ ನಿರ್ವಹಣೆಗೆ ಕಾವಲುಗಾರರನ್ನು ಮತ್ತು ಇಲಾಖಾ ವಾಹನಗಳಿಗೆ ವಾಹನ ಚಾಲಕರ ಸೇವೆಯನ್ನು Out Source (ಹೊರಗುತ್ತಿಗೆ) ಸಂಪನ್ಮೂಲ ಏಜನ್ಸಿಯವರ ಮೂಲಕ ಪಡೆಯಲು ಸಂಕ್ಷಿಪ್ತ ಅಲ್ಪಾವಧಿ **ಮರು ಟೆಂಡರ್** ಕುರಿತು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ (https://eproc.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ನೋಂದಾಯಿತ ಅಧಿಕೃತ ಸೇವಾ ಸಂಸ್ಥೆಯವರು ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ.

| | | |
|---|---|---|
| 1 | ಟೆಂಡರು ಸ್ಥಳ | ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಹೊನ್ನಾವರ ವಿಭಾಗ, ಹೊನ್ನಾವರ |
| 2 | ಟೆಂಡರ ಸ್ವೀಕರಿಸುವ ದಿನಾಂಕ ಮತ್ತು ವೇಳೆ | ಟೆಂಡರನ್ನು ಈ-ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 20.05.2020 ಅಪರಾಹ್ನ 3.00 ಗಂಟೆ<br>ಅ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21.05.2020 ಅಪರಾಹ್ನ 3.30 ಗಂಟೆಗೆ. ತಾಂತ್ರಿಕ ಬಿಡ್‌ನ ಷರತ್ತುಗಳಲ್ಲಿ ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಷರತ್ತುಗಳನ್ನು ಪೂರೈಸದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.<br>ಆ) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 22.05.2020 ಅಪರಾಹ್ನ 4.00 ಗಂಟೆಗೆ |
| 3 | ಟೆಂಡರು ಸ್ವೀಕರಿಸುವ ಅಧಿಕಾರಿಗಳು | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ ಇಲ್ಲವೇ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು |

**:ಟೆಂಡರುದಾರರು ಗಮನಿಸಬೇಕಾದ ಹಾಗೂ ಇ-ಟೆಂಡರ್‌ನಲ್ಲಿ ಭಾಗವಹಿಸಲು ಇರಬೇಕಾದ ಅರ್ಹತೆಗಳು:**

1. ಟೆಂಡರು ಹಾಕುವ ಹೊರಗುತ್ತಿಗೆ ಏಜೆನ್ಸಿಯವರು ಸದ್ರಿ ಕೆಲಸಗಳಿಗೆ ಕೆಲಸಗಾರರನ್ನು ಒದಗಿಸಿ ಕೊಡಲು ತಾವು ತೆಗೆದುಕೊಳ್ಳುವ ಸೇವಾ ಶುಲ್ಕವನ್ನು ಸ್ಪಷ್ಟವಾಗಿ ನಮೂದಿಸಬೇಕು.

2. ಟೆಂಡರುದಾರರು ಮಾನವ ಹೊರಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಈ ಕೆಳಕಂಡ ಕಾಯ್ದೆಗಳ ಪ್ರಕಾರ ಕಡ್ಡಾಯವಾಗಿ ನೋಂದಣಿ ಮಾಡಿಕೊಂಡಿರಬೇಕು ಹಾಗೂ ಪ್ರತಿಯನ್ನು ಲಗತ್ತಿಸಬೇಕು.

   i. ಕಾರ್ಮಿಕ ಕಾಯ್ದೆ

ii. ಆಧಾರ ಕಾರ್ಡ ಸಂಖ್ಯೆ.

iii. ಕಾರ್ಮಿಕ ಭವಿಷ್ಯ ನಿಧಿ (ಇ.ಪಿ.ಎಫ್) ಕಾಯ್ದೆ

iv. ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆ

v. ಆದಾಯ ತೆರಿಗೆ ಕಾಯ್ದೆ

vi. ಸೇವಾ ತೆರಿಗೆ ಕಾಯ್ದೆ

vii. PAN ಹಾಗೂ TAN ಹೊಂದಿರಬೇಕು.

viii. ಸರಕು ಮತ್ತು ಸೇವಾ ತೆರಿಗೆ ಕಾಯ್ದೆ (GST)

3. ಚಾಲ್ತಿಯಲ್ಲಿರುವ ಆದಾಯಕರ, ಮೌಲ್ಯ ಮತ್ತು ವರ್ಧಿತ ಕರ ತೀರಿಕೆ ಪ್ರಮಾಣ ಪತ್ರ ಹಾಗೂ ಹಿಂದಿನ ಎರ ಆರ್ಥಿಕ ವರ್ಷಗಳಲ್ಲಿ ಆದಾಯ ಮತ್ತು ನಷ್ಟದ ಬಗ್ಗೆ ಚಾರ್ಟರ್ಡ ಅಕೌಂಟಂಟ್‌ರವರಿಂದ ಆಡಿಟ್ ಮಾಡಿಸಲಾ ಬ್ಯಾಲೆನ್ಸ್ ಶೀಟ್ ಪ್ರಮಾಣ ಪತ್ರದ ಪ್ರತಿ ಸಲ್ಲಿಸಬೇಕು.

4. 2020-21 ನೇ ಸಾಲಿಗೆ ಹೊನ್ನಾವರ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರೆಂ ನೋಂದಾಯಿಸಿಕೊಂಡಿರತಕ್ಕದ್ದು.

5. ಈಗಾಗಲೇ ರಕ್ಷಣಾ ಕಾರ್ಯದಲ್ಲಿ ಮತ್ತು ವಾಹನ ಚಾಲಕರಾಗಿ ನೇಮಿಸಿಕೊಂಡ ದಿನಗೂಲಿ ನೌಕರರಿಗೆ ಕಡ್ಡಾಯವಾ ಇದ್ದ ಸ್ಥಳದಲ್ಲಿಯೇ ಮುಂದುವರಿಸುವುದು.

6. ಟೆಂಡರುದಾರರು ಮಾನವ ಹೊರಸಂಪನ್ಮೂಲ ಏಜೆನ್ಸಿಯಾಗಿ ವಿವಿಧ ಸಂಸ್ಥೆಗಳಿಗೆ ಕಳೆದ ಎರಡು ವರ್ಷಗಳಲ್ಲಿ ಪ್ರ ವರ್ಷ ಸರಾಸರಿ 50 ಸಿಬ್ಬಂದಿಗಳನ್ನು ಒದಗಿಸಿದ ಅನುಭವ ಹೊಂದಿರಬೇಕು.

7. ಹೊರಸಂಪನ್ಮೂಲ ಏಜೆನ್ಸಿಯಾಗಿ ಮಾನವ ಸಂಪನ್ಮೂಲ ಸೇವೆಯನ್ನು ಸರ್ಕಾರಿ ಮತ್ತು ಅರೆ ಸರ್ಕಾರಿ ಇಲಾಖೆಗಳ ವಿಶೇಷವಾಗಿ ಅರಣ್ಯ ಇಲಾಖೆಗೆ ಅರಣ್ಯದಲ್ಲಿ, ನರ್ಸರಿಯಲ್ಲಿ ಹಾಗೂ ಕೃಷಿ-ತೋಟಗಾರಿಕೆ ಇಲಾಖೆಯಲ್ಲಿ ಕೆಲಸವನ ನಿರ್ವಹಿಸಿದ ಬಗ್ಗೆ ವಾಹನ ಚಾಲನೆ ಅನುಭವವಿರುವ ನುರಿತ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಿದ ಬ ನೀಡಿರುವ ವಿವರ ಮತ್ತು ದೃಢೀಕೃತ ದಾಖಲೆಗಳನ್ನು ಸಲ್ಲಿಸಬೇಕು.

8. ಟೆಂಡರುದಾರ ಸಂಸ್ಥೆಯು/ವ್ಯಕ್ತಿಯು ಕಳೆದ ವರ್ಷಗಳಲ್ಲಿ ವ್ಯವಹರಿಸಿರುವ ವಾರ್ಷಿಕ ವಹಿವಾಟುಗಳ ಮೊತ್ತ ಕನಿ ಸರಾಸರಿ ರೂ. 10.00 ಲಕ್ಷ ಇರತಕ್ಕದ್ದು. ವಿವರಗಳು ಮತ್ತು ದಾಖಲೆಗಳ ಪ್ರತಿಯನ್ನು ಸಲ್ಲಿಸಬೇಕು.

9. ಟೆಂಡರುದಾರರು ಆರ್ಥಿಕವಾಗಿ ಸದೃಢರಾಗಿರಬೇಕು.

10. ಟೆಂಡರ್ ಅಂಗೀಕರಿಸುವ ಹಾಗೂ ತಿರಸ್ಕರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವ ವಿಭಾಗ, ಹೊನ್ನಾವರ ರವರು ಹೊಂದಿರುತ್ತಾರೆ.

11. ಮೇಲ್ಕಂಡ ಎಲ್ಲಾ ಕಾಯ್ದೆಗಳಲ್ಲಿ ನೋಂದಣಿ ಮಾಡಿದ ಬಗ್ಗೆ ನೋಂದಣಿ ಪ್ರಮಾಣ ಪತ್ರಗಳನ್ನು ದೃಢೀಕರಿ ಸಲ್ಲಿಸಬೇಕು.

12. ಟೆಂಡರ್‌ದಾರರು ಇಎಂಡಿ ಹಣವನ್ನು ಆನ್ ಲೈನ್ ಮೂಲಕವೇ ಭರಿಸುವುದು. ಪ್ರತಿ ಘಟಕಕ್ಕೆ ಪ್ರತ್ಯೇಕ ಟೆಂಡರನ e-portal ಮೂಲಕ ಸಲ್ಲಿಸತಕ್ಕದ್ದು.

13. ಟೆಂಡರು ಪ್ರಕಟಣೆಯಲ್ಲಿ ಅನುಬಂಧ-1 ರಲ್ಲಿ ನಮೂದಿಸಿದ ಮಜೂರಿ ಪಾವತಿ ಇತ್ಯಾದಿ ದರಗ ಅಂದಾಜಿನದಾಗಿದ್ದು ವಾಸ್ತವಿಕ 2020-21 ನೇ ಸಾಲಿಗೆ ಮಂಜೂರಾದ ದರಗಳನ್ನು ಆಧರಿಸಿ ಹಣ ಪಾವತಿಗೆ ಕ್ರ ಕೈಗೊಳ್ಳುವುದು. ಎಪಿಸಿ ಕ್ಯಾಂಪ ಮತ್ತು ರಕ್ಷಣಾ ಶಿಬಿರಗಳ ಕಾವಲುಗಾರರು ಹಾಗೂ ವಾಹನ ಚಾಲಕರ 2020- ನೇ ಸಾಲಿಗೆ ನಮೂದಿಸಿದ ಸಂಖ್ಯೆ ಅಂದಾಜಿನದಾಗಿದ್ದು ವಾಸ್ತವಿಕ ಅನುದಾನ ಮಂಜೂರಿ ಆಧರಿಸಿ ಎಪಿಸಿ/ಶಿ ಕ್ಯಾಂಪಗಳಿಗೆ ಮತ್ತು ವಾಹನ ಚಾಲಕರ ನೇಮಕದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಪ್ರತಿ ತಿಂಗಳ ವೇತ ಪಾವತಿಯನ್ನು ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆ ಮಾಡುವ ಅನುದಾನಕ್ಕೆ ಬದ್ಧರಿರತಕ್ಕದ್ದು.

14. 2019-20 ನೇ ಸಾಲಿಗೆ ಯಶಸ್ವಿ ಟೆಂಡರುದಾರರು ಪ್ರಸಕ್ತ ಸಾಲಿನ ಟೆಂಡರನಲ್ಲಿ ಭಾಗವಹಿಸುವದಾದಲ್ಲಿ 2019- ನೇ ಸಾಲಿಗೆ ಹೊನ್ನಾವರ ವಿಭಾಗದಲ್ಲಿ ಟೆಂಡರ ಪಡೆದ ಪ್ರತಿಯೊಬ್ಬ ರಕ್ಷಣಾ ಶಿಬಿ

ಕಾವಲುಗಾರರು/ವಾಹನಚಾಲಕರ ಹೆಸರಿನ ಜೊತೆಗೆ ಅವರ ವೇತನ ಪಾವತಿಸಿದ ಮತ್ತು ಪಿಎಫ್ ಮತ್ತು ಇಎಸ್ಐ ಪಾವತಿಸಿದ ತಿಂಗಳವಾರು (ಎಪ್ರಿಲ್-2019 ರಿಂದ ಮಾರ್ಚ-2020 ರವರೆಗೆ) computer generated ಪ್ರತಿಯನ್ನು ವಿಭಾಗೀಯ ಕಛೇರಿಗೆ ಟೆಂಡರ ಹಾಕುವ ಮುಂಚಿತವಾಗಿ ಈ ಕೆಳ ಸಹಿಮಾಡಿದವರ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

15. ಯಾವುದೇ ಇಲಾಖೆ/ ಸಂಸ್ಥೆಯಲ್ಲಿ ಕಪ್ಪು ಪಟ್ಟಿಗೆ ಸೇರಿದ ಗುತ್ತಿಗೆದಾರರು ಟೆಂಡರಿನಲ್ಲಿ ಭಾಗವಹಿಸತಕ್ಕದ್ದಲ್ಲ. ಈ ಬಗ್ಗೆ ಸ್ವಯಂಘೋಷಣಾ ಪತ್ರವನ್ನು ಲಗತ್ತಿಸಬೇಕು.

16. ವಿವಿಧ ತರಹದ ಸೇವೆಗಳಿಗೆ ಸಂಬಂಧಿಸಿದಂತೆ ಹಾಲಿ ಇರುವ ದರದಂತೆ ಈ ಕೆಳಗಿನಂತೆ ಮಜೂರಿ ಪಾವತಿಸಬೇಕಾಗಿರುತ್ತದೆ. ಹಾಗೂ ಅನುಬಂಧ-1ರಲ್ಲಿ ನಮೂದಿಸಿದಂತೆ ಇಎಸ್ಐ ಪಿ.ಎಫ್, ಇತ್ಯಾದಿ ಕಡಿತಗೊಳಿಸಬೇಕಾಗುತ್ತದೆ.

17. ಕಾವಲುಗಾರರ ಮತ್ತು ವಾಹನ ಚಾಲಕರ ದರವನ್ನು ಅನುಬಂಧ-1 ರಲ್ಲಿ ತೋರಿಸಲಾಗಿದ್ದು ಸದರಿ ಮೊತ್ತವು ಅಂದಾಜಿನದಾಗಿದ್ದು 2020-21 ನೇ ಸಾಲಿನ ನೈಜದರದಂತೆ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

18. ಪ್ರತಿ ತಿಂಗಳು ಮುಕ್ತಾಯಗೊಂಡ ನಂತರ ಸಂಬಂಧಪಟ್ಟ ಆಯಾ ವಲಯ ಅರಣ್ಯ ಅಧಿಕಾರಿಯವರ ಮುಖಾಂತರ ಬಿಲ್ಲನ್ನು ಹಣ ಪಾವತಿಗಾಗಿ ಸಲ್ಲಿಸುವುದು.

19. ಟೆಂಡರುದಾರರು ಮಾನವ ಸಂಪನ್ಮೂಲವನ್ನು ಒದಗಿಸಿದ ನಂತರ ಸದ್ರಿಯವರಿಗೆ ಮಾಸಿಕ ಮಜೂರಿ ಪಾವತಿಸುವಾಗ ನಿಗಧಿಪಡಿಸಿದ PF, ESI ಯನ್ನು ಕಡಿತಗೊಳಿಸಿ ಮಜೂರಿಯನ್ನು ಸಂಬಂಧಪಟ್ಟವರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಬೇಕು. ಹಾಗೂ PF, ESI ಯನ್ನು ಸಂಬಂಧಪಟ್ಟ ಇಲಾಖೆಗೆ ಜಮಾ ಮಾಡಬೇಕು. ಮತ್ತು ವಲಯ ಕಛೇರಿಗೆ ಹಾಗೂ ವಿಭಾಗೀಯ ಕಛೇರಿಗೆ computer generated ಪ್ರತಿಯನ್ನು ಪ್ರತಿ ತಿಂಗಳು ಸಲ್ಲಿಸತಕ್ಕದ್ದು.

20. ಟೆಂಡರುದಾರರು ಮಾನವ ಸಂಪನ್ಮೂಲವನ್ನು ಒದಗಿಸಿದ ನಂತರ ಅವರಿಗೆ ಪ್ರತಿ ತಿಂಗಳು 5 ನೇ ತಾರೀಖಿನೊಳಗಾಗಿ ಮಜೂರಿ ಪಾವತಿಸಬೇಕು ಹಾಗೂ ಈ ವಿಭಾಗದಿಂದ ಹಣವನ್ನು ಸಂದಾಯ ಮಾಡಿದ ನಂತರವೂ ಕೆಲಸಗಾರರಿಗೆ ಹಣ ಪಾವತಿಸದಿರುವುದು ಕಂಡುಬಂದಲ್ಲಿ ಯಾವುದೇ ಕಾರಣ ನೀಡದೇ ನಿಮಗೆ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸುವ ಷರತಿಗೆ ಒಳಪಟ್ಟಿರಬೇಕು.

21. ಟೆಂಡರನ್ನು ಹಾಗೂ ಯಶಸ್ವಿ ಟೆಂಡರುದಾರರ ಟೆಂಡರನ್ನು ಸಹ ಯಾವುದೇ ಕಾರಣಕೊಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ ರವರು ಹೊಂದಿರುತ್ತಾರೆ.

22. ಟೆಂಡರ್‌ನಲ್ಲಿ ಭಾಗವಹಿಸುವವರು ಭಾರತದ ಪ್ರಜೆಯಾಗಿರಬೇಕು ಮತ್ತು ಚುನಾವಣಾ ಆಯೋಗವು ನೀಡುವ ಗುರುತಿನ ಚೀಟಿಯನ್ನು ಹೊಂದಿರಬೇಕು.

23. ಯಶಸ್ವಿ ಟೆಂಡರುದಾರರು ಯಾವುದೇ ಕಾರಣಕ್ಕೂ ಸದ್ರಿಯವರ ಟೆಂಡರನ್ನು ಇನ್ನೊಬ್ಬರಿಗೆ ವರ್ಗಾಯಿಸಲು ಅವಕಾಶ ಇರುವುದಿಲ್ಲ.

24. ಟೆಂಡರಿನಲ್ಲಿ ಇಡಲಾದ ಕಾಮಗಾರಿಯನ್ನು ಯಾವುದೇ ಕಾರಣ ನೀಡದೇ ಟೆಂಡರು ಪ್ರಕ್ರಿಯೆಯಿಂದ ಹೊರಗಿಡುವ ಅಥವಾ ಅದಲು-ಬದಲು ಮಾಡುವ ಹಕ್ಕನ್ನು ಈ ಕೆಳ ಸಹಿದಾರರು ಕಾಯ್ದಿರಿಸಿ ಕೊಂಡಿರುತ್ತಾರೆ.

25. ಈ ಟೆಂಡರ್‌ನಲ್ಲಿ ನಮೂದಿಸಿದ ಕೆಲಸಗಳಿಗೆ ಕ್ರಿಯಾಯೋಜನೆಯಲ್ಲಿ ಮಂಜೂರಾಗುವ ಮೊತ್ತವೆ ಅಂತಿಮವಾಗಿರುತ್ತದೆ. ಇದಕ್ಕೆ ಟೆಂಡರಿನಲ್ಲಿ ಭಾಗವಹಿಸುವ ಹೊರಗುತ್ತಿಗೆದಾರ ಸಂಸ್ಥೆಯವರು ಬದ್ಧರಿರಬೇಕು.

26. ಟೆಂಡರ್‌ನಲ್ಲಿ ನಮೂದಿಸಿದ ಕೆಲಸ ಕಾರ್ಯಗಳಿಗೆ ನಿಗಧಿಪಡಿಸಿದ ದರ ಮತ್ತು ಮೊತ್ತದಲ್ಲಿ ಹೆಚ್ಚು ಕಡಿಮೆ ಆಗ ಬಹುದಾಗಿದ್ದು, ಮಂಜೂರಾದ ಅಂದಾಜು ಪಟ್ಟಿಯೇ ಅಂತಿಮವಾಗಿರುತ್ತದೆ.

27. ಪ್ರಸ್ತುತ 2020-21 ನೇ ಸಾಲಿಗೆ ನಿಗದಿಪಡಿಸಿರುವ ಹೊರಗುತ್ತಿಗೆ ಕೆಲಸಗಾರರ ಸಂಖ್ಯೆಯು ಹೆಚ್ಚು ಅಥವ ಕಡಿಮೆ ಆಗುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ 'ರವ ತೀರ್ಮಾನವೇ ಅಂತಿಮವಾಗಿದ್ದು ಅದಕ್ಕೆ ಬದ್ದರಾಗಿರತಕ್ಕದ್ದು.

28. ಕಾಮಗಾರಿಯ ವೇಳೆ ಗುತ್ತಿಗೆದಾರರು ನೇಮಿಸಿದ ಕಾರ್ಮಿಕರಿಗೆ ಯಾವುದೇ ರೀತಿ ಪ್ರಾಣಾಪಾಯ ಹಾ ಉಂಟಾದಲ್ಲಿ ಅದಕ್ಕೆ ಗುತ್ತಿಗೆದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಇಲಾಖೆಯು ಯಾವುದೇ ರೀ ಜವಾಬ್ದಾರಿಯಾಗಿರುವದಿಲ್ಲ.

29. ಯಶಸ್ವಿ ಟೆಂಡರುದಾರರು ಕರಾರುನಾಮೆ ಸಮಯದಲ್ಲಿ ಟೆಂಡರ್ ಮೊತ್ತದ ಶೇಕಡಾ 5% ರಷ್ಟು ಭದ್ರತ ಠೇವಣಿಯನ್ನು ಎಫ್‌ಡಿಆರ್/ರಾಷ್ಟ್ರೀಯ ಉಳಿತಾಯ ರೂಪದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವ ವಿಭಾಗ, ಹೊನ್ನಾವರ ರವರ ಹೆಸರಿನಲ್ಲಿ ಪ್ಲೆಡ್ಜ್ ಮಾಡಿ ಇಡುವದು.

30. ಗುತ್ತಿಗೆದಾರರು ಕರಾರು ನಾಮೆಗೆ ಸಹಿ ಹಾಕಿದ ನಂತರ ಮೃತಪಟ್ಟಲ್ಲಿ ಅವರ ವಾರಸುದಾರರು ನೋಂದಾಯಿ ಗುತ್ತಿಗೆದಾರರಾಗಿದ್ದಲ್ಲಿ ಅವರು ಸದರಿ ಕೆಲಸವನ್ನು ಮುಂದುವರೆಸಿ ಕೆಲಸಗಾರರನ್ನು ಪೂರೈಸಬಹುದಾಗಿರುತ್ತದೆ.

31. ಹೆಚ್ಚಿನ ವಿವರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ರವರ ಕಚೇರಿಯ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

(ಗಣಪತಿ ಕೆ. ಭಾ.ಅ.ಸೇ)

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ

ಅನುಬಂಧ–1

ಹೊನ್ನಾವರ ಅರಣ್ಯ ವಿಭಾಗದಲ್ಲಿ 2020–21ನೇ ಸಾಲಿನಲ್ಲಿ ಪೂರೈಸಬೇಕಾದ ಹೊರ ಸಂಪನ್ಮೂಲ ಸೇವೆಗಳ ವಿವರ

| Tender Unit No. | Range | Details | No of watchers | No of days. | Rate/day | Wages Amount (Rs. in lakhs) | PF Contribution (13.16%) or as per present rate | ESI Contribution (4.75%) or as per present rate | Total (7+8+9) | Total (10+11) | GST Tax (18%) (col 12) or as per present rate | Total (12+13) | Ration (Rs 75/-) | G.TOTAL (14+15) | EMD 2.5% | Security deposit 5% . |
|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| | **Budget.Head:2406-01-001-2-01-General Establishment-034-Contract/Outsource** | | | | | | | | | | | | | | | |
| 1 | Bhatkal | Engaging watchers for maintenance of Protection Camp at Nooz From: April-2020 to March-2021 | 20 | 365 | 360.49 | 26.316 | 3.463 | 1.250 | 31.029 | 31.029 | 5.585 | 36.614 | 5.475 | 42.089 | 1.193 | 2.387 |
| | Honnavar | Engaging watchers for maintenance of Protection Camp at Hodikeshirur From: April-2020 to March-2021 | | | | | | | | | | | | | | |
| | Gersappa | Engaging watchers for maintenance of Protection Camp at Kudrigi From: April-2020 to March-2021 | | | | | | | | | | | | | | |
| | Kumta | Engaging watchers for maintenance of Protection Camp at Hulidevarkodlu From: April-2020 to March-2021 | | | | | | | | | | | | | | |
| | Katgal | Engaging watchers for maintenance of Protection Camp at Devimane From: April-2020 to March-2021 | | | | | | | | | | | | | | |
| | **Budget.Head:2406-01-001-2-01-General Establishment-034-Contract/Outsource** | | | | | | | | | | | | | | | |
| | Honnavar | Engaging PCP Driver From: 1-4-2020 to 31-3-2021 Govt Vehicle Bolerio KA-47-G-23 Honnavar Range | 3 | 365 | 371.49 | 4.068 | 0.535 | 0.193 | 4.796 | 4.796 | 0.863 | 5.660 | 0.000 | 5.660 | | |
| | Honnavar | Engaging PCP Driver From: 1-4-2020 to 31-3-2021 Govt Vehicle Bolerio KA-47-G-24 Honnavar Range | | | | | | | | | | | | | | |
| | Bhatkal | Engaging PCP Driver From: 1-4-2020 to 31-3-2021 Govt Vehicle Bolerio KA-47-G-0055 Bhatkal Range | | | | | | | | | | | | | | |

| Tender Unit No. | Range | Details | No of watchers | No of days. | Rate/day | Wages Amount (Rs. in lakhs) | PF Contribution (13.16%) or as per present rate | ESI Contribution (4.75%) or as per present rate | Total (7+8+9) | Total (10+11) | GST Tax (18%) (col 12) or as per present rate | Total (12+13) | Ration (Rs 75/-) | G.TOTAL (14+15) | EMD 2.5% | Security deposit 5% |
|---|---|---|---|---|---|---|---|---|---|---|---|---|---|---|---|---|
| | **2406-02-110-0-54-Wildlife Preservation,nature conservation,wildlife habitat management & man-animal conflict measure 139 m.w** | | | | | | | | | | | | | | | |
| 2 | Honnavar | Engaging watchers for maintenance of APC Camps From: April-2020 to March-2021 (1 APC) | 20 | 365 | 360.49 | 26.316 | 3.463 | 1.250 | 31.029 | 31.029 | 5.585 | 36.614 | 5.475 | 42.089 | 1.052 | 2.100 |
| | Kumta | Engaging watchers for maintenance of APC Camps From: April-2020 to March-2021 (3 APC) | | | | | | | | | | | | | | |
| | Gersappa | Engaging watchers for maintenance of APC Camps From: April-2020 to March-2021 (3 APC) | | | | | | | | | | | | | | |
| | Bhatkal | Engaging watchers for maintenance of APC Camps From: April-2020 to March-2021 (1 APC) | | | | | | | | | | | | | | |
| | Manki | Engaging watchers for maintenance of APC Camps From: April-2020 to March-2021 (2 APC) | | | | | | | | | | | | | | |

Deputy Conservator of Forests
Honnavar Division Honnavar.